2nd PU SANSKRIT Key answer 2025

१. अधोनिर्दिष्टानां प्रश्नानां उत्तराणि कोष्टकात् उध्दृत्य लिखत।10×1=10

1. इ) स्वार्थम् ।
2. अ) योगिवेषेण ।
3. ई) विक्रमादित्यस्य ।
4. आ) भिक्षार्थम् ।
5. अ) कण्वः ।
6. ई) सैन्यसंग्रहणार्थम्।
7. इ) अच्छोदसरः ।
8. अ) षट् पुत्राः, द्वे पुत्र्यौ।
9. आ) सहनगुणम्।
10. इ) उत्साहः।

२. मञ्जूषातः सूक्तं पदं चित्वा रिक्तस्थानं पूरयत।5×1=5

11. नराः
    पुत्रं
    प्रजापतिः
    सैन्यं
    कृपया

३. संयोजयत । 5 ×1=5

12. गङ्गा
    वायुः
    सरस्वत्याः
    वस्त्रापणम्
    गुप्तधनम्

PART-B

४. द्वित्रैः वाक्यैः संस्कृत/कन्नड/आङ्ग्लभाषया वा उत्तरं लिखत।(चतुर्णामेव)4×2=8

13. ಭಾರತದ ದ್ವೀಪಗಳು – ಇಂದ್ರದ್ವೀಪ , ಕಶೇರುಮಾನ್ , ತಾಮ್ರವರ್ಣ , ಗಭಸ್ತಿಮಾನ್ , ನಾಗದ್ವೀಪ , ಸೌಮ್ಯ, ಗಾಂಧರ್ವ ಹಾಗೂ ವಾರುಣ .
    Islands of the Bharata are-
    Indradveepa, Kasheruman,Tamravarn, Gabhastiman, Nagadveepaha, Soumya, Gandharva, and Varuna.

14. "ಹೇ ಮಹಾತ್ಮನೇ! ಈ ಕಲ್ಲಿನಮೇಲೆ ಬಂದು ಯಾರು ಕುಳಿತುಕೊಳ್ಳುವರೋ ಅವರು ನಾನು ಬರುವ ಮೊದಲೇ ಭಯದಿಂದ ಪ್ರಾಣ ಬಿಡುತ್ತಾರೆ. ಆದರೆ ನೀನು ನಗುಮೊಗದಿಂದ ಕುಳಿತಿರುವೆ. ಯಾರ ಮರಣಕಾಲ ಸಮೀಪಿಸುವುದೋ ಅವರ ಇಂದ್ರಿಯಗಳು ತಮ್ಮ ಸಾಮರ್ಥ್ಯವನ್ನು(ಕಾಂತಿಯನ್ನು) ಕಳೆದುಕೊಳ್ಳುತ್ತವೆ. ಆದರೆ ನೀನು ಇನ್ನೂ ಅಧಿಕ ಕಾಂತಿಯಿಂದ ಕೂಡಿರುವೆ. ಹಾಗಾದರೆ ನೀನು ಯಾರು?" ಎಂದು ರಾಕ್ಷಸನು ಆಶ್ಚರ್ಯದಿಂದ ವಿಕ್ರಮಾದಿತ್ಯನಲ್ಲಿ ಪ್ರಶ್ನಿಸಿದನು.
    Bakasura was astonished to see Vikramaditya sitting happily on the rock, said, "Those who sit daily on this rock are dead with fright even before I arrive. However, you are smiling. A man's physical and mental abilities droop and decline when he is about to die, but you are radiant and beaming. So, tell me who you are?

15. ತಾಯಿಯ ಜೊತೆಗೆ ಅಚ್ಛೋದ ಸರೋವರಕ್ಕೆ ಸ್ನಾನಕ್ಕಾಗಿ ಹೊರಟ ಮಹಾಶ್ವೇತೆ ದಾರಿಯಲ್ಲಿ ಕಾಡಿನಗಾಳಿಯಿಂದ ತರಲ್ಪಟ್ಟ, ದುಂಬಿಗಳಕುಲದಿಂದ ನಾ ಮುಂದು ತಾ ಮುಂದು ಎಂದು ಹಿಂಬಾಲಿಸಲ್ಪಡುತ್ತಿರುವ, ಹಿಂದೆಂದೂ ಆಸ್ವಾದಿಸಿರದ, ಮನುಷ್ಯಲೋಕದಲ್ಲಿಇಲ್ಲದ, ದೇವಲೋಕೋಚಿತವಾದ ಒಂದು ಹೂವಿನ ಪರಿಮಳವನ್ನು ನಾನು ಆಘ್ರಾಣಿಸಿದೆ ಎಂದು ಮಹಾಶ್ವೇತೆ ಹೇಳುತ್ತಾಳೆ.
Once, on one of the days in the month of Chaitra, Mahashveta had gone with her mother to the lake Achchhoda to take bath. Captivated by the endearing beauty of the place, Mahashveta wandered about and at a certain spot she smelt the fragrance of some flower, suddenly borne to her, which overpowered the odour of all the other blooming flowers of the forest. Swarms of bees rushed after the fragrance in competition to smell it first, which was such as had never been smelt before, and was one fit for the world of immortals.

16. ಶಾಂತಿಯು ತನ್ನ ಗಂಡನ ಪರವಾಗಿ ತರುಣನಿಗೆ ಕೃತಜ್ಞತೆಯನ್ನು ಸಮರ್ಪಿಸಿ, ಆಕೆಯ ಗಂಡನ ಮೊದಲ ವರ್ಷದ ಶ್ರಾದ್ಧವಿರುವುದರಿಂದ ಆತನಿಂದ ಆಶೀರ್ವಾದವನ್ನೂ ಸಹ ಪಡೆಯುವ ಸಲುವಾಗಿ ಆತನನ್ನು ಹುಡುಕಿಕೊಂಡು ಬರುತ್ತಾಳೆ.
Shanthi went to the young man to express her gratitude on behalf of her husband. She also sought his blessings since it was her husband's first death anniversary the next day.

17. “विधिविलसितम्” ("ವಿಧಿವಿಲಸಿತಮ್") ಎಂಬ ನಾಟಕದಲ್ಲಿ ವಜ್ರಕೀಟದ ಚಿತ್ರಣವಿದೆ. ಕರ್ಣನು ಮಲಗಿರುವ ತನ್ನ ಗುರುಗಳಾದ ಪರಶುರಾಮರ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡಿರುತ್ತಾನೆ. ಆ ಸಮಯದಲ್ಲಿ ವಜ್ರಕೀಟವು ಕರ್ಣನ ಉಬ್ಬಿದ ಎರಡೂ ತೊಡೆಗಳನ್ನು ತನ್ನ ಕೋರೆಯಿಂದ ಸೀಳಿ ರಕ್ತವನ್ನು ಕುಡಿಯುತ್ತದೆ. ಬಳಿಕ ತೊಡೆಯ ಮಾಂಸವನ್ನು ಭಕ್ಷಿಸತೊಡಗುತ್ತದೆ.
The Vajrakeeta episode occurs in the play “विधिविलसितम्” ('Vidhivilasitam'). Karna places the head of his preceptor on his lap to ensure that he has a sound sleep. At that moment, an insect called Vajradumbi begins to bite the thigh of Karna. It starts to eat his flesh and drink his blood.

18. ಸತ್ಯವಾದ ಒಳ್ಳೆಯ ಮಾತು , ದಯೆ,ದಾನ ಮಾಡುವುದು, ದೀನರಿಗೆ ರಕ್ಷಣೆ ಕೊಡುವುದು, ಸಜ್ಜನರ ಸಹವಾಸದಲ್ಲಿರುವುದು,ಒಳ್ಳೆಯವರಿಗೆ ಹಿತವನ್ನು ಬಯಸುವುದು - ಇವುಗಳನ್ನು ಸತ್ಪುರುಷರು ತಮ್ಮ ಜೀವನದಲ್ಲಿ ವ್ರತದಂತೆ ಆಚರಿಸುವರು.
Pleasant and truthful words, compassion, charity, protection of the oppressed, helping those who seek refuge, and association with the virtuous - these are the praiseworthy practices of a pious person.

19. ಕೃಷ್ಣಶಾಸ್ತ್ರಿ ಮಹೋದಯರು ತಮ್ಮ ಗುರುಗಳನ್ನು ಅನುಸರಿಸಿ ಕೊನೆಗೆ ಅವರೊಬ್ಬ ಆದರ್ಶ ಅಧ್ಯಾಪಕರಾದರು. ಅವರು ಯಾವಾಗಲೂ ಚೆನ್ನಾಗಿ ಪಾಠದ ಸಿದ್ಧತೆಯನ್ನು ಮಾಡಿಕೊಂಡೇ ವರ್ಗದ ಕೋಣೆಯನ್ನು ಪ್ರವೇಶಿಸುತ್ತಿದ್ದರು. ಅವರ ಬೋಧನೆಯ ಶೈಲಿ ವಿದ್ಯಾರ್ಥಿಗಳಿಗಂತೂ ತೀರಾ ಅಚ್ಚುಮೆಚ್ಚಿನದಾಗಿತ್ತು.
Krishna Sastri became an ideal teacher by following what his teachers told him. He would always enter the classroom well-prepared. His teaching style attracted students towards him.

५. पाठनाम उल्लिख्य कः कं प्रति अवदत् इति संस्कृतभाषया लिखत।(चतुर्णामेव)4×2=8

20. पाठनाम - परेषामपि रक्ष जीवितम्। अथवा इदं वाक्यं “परेषामपि रक्ष जीवितम्” इति पाठात् स्वीकृतम्।
इदं वाक्यं विक्रमादित्यः राक्षसं प्रति अवदत्।

21. पाठनाम – शून्या मेऽङ्गुलिः। अथवा इदं वाक्यं
"शून्या मेऽङ्गुलिः" इति पाठात् स्वीकृतम्।
गौतमी शकुन्तलां प्रति अवदत् ।

22. पाठनाम – शून्या मेऽङ्गुलिः। अथवा इदं वाक्यं
"शून्या मेऽङ्गुलिः" इति पाठात् स्वीकृतम्।
दुष्यन्तः ऋषीणां प्रति अवदत् ।

23. पाठनाम – महाराणाप्रतापः । अथवा इदं वाक्यम् "महाराणाप्रतापः" इति पाठात् स्वीकृतम्।
राणाप्रतापः भामशाहं प्रति अवदत् ।

24. पाठनाम – अनुरागोदयः| अथवा इदं वाक्यम् "अनुरागोदयः" इति पाठात् स्वीकृतम्।
कपिञ्जलः महाश्वेतां प्रति अवदत् ।

25. पाठनाम – विधिविलसितम्| इदं वाक्यं "विधिविलसितम्" इति पाठात् स्वीकृतम्।
परशुरामः कर्णं प्रति अवदत्।

26. पाठनाम – कृष्णशास्त्रिमहोदयः ।अथवा इदं वाक्यं "कृष्णशास्त्री महोदयः" इति पाठात् स्वीकृतम्।
कृष्णशास्त्रिमहोदयः डा ।कृष्णराव् महोदयं प्रति अवदत् ।

PART-C

६. पाठनाम उल्लिख्य श्लोकानाम् अनुवादं कन्नड/आङ्ग्लभाषया वा कुरुत।(द्वयोरेव)2×3=6

27. ಈ ಶ್ಲೋಕವನ್ನು "पुराणभारतम्" ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಾಗರದಿಂದ ಆವೃತವಾಗಿರುವ ಇದು ಒಂಭತ್ತನೇಯ ದ್ವೀಪವಾಗಿದೆ. ಈ ದ್ವೀಪವು ದಕ್ಷಿಣದಿಂದ ಉತ್ತರಕ್ಕೆ ಸಾವಿರಯೋಜನದಷ್ಟು ವಿಸ್ತಾರವಾಗಿದೆ.
This shoka is taken from the chapter"पुराणभारतम्".
This island is the ninth one. This island surrounded by the ocean. The whole of the island is 1000 yojanas (1 yojana = 12km) in extent from north to south.

28. ಈ ಶ್ಲೋಕವನ್ನು" निर्विमर्शा हि भीरवः" ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.
ಪೆಟ್ಟಿಗೆಯಲ್ಲಿ ಘೋರವಾದ ವಾನರವನ್ನು ಇರಿಸಿ ಮೊದಲಿನಂತೆಯೆ ಮೇಲೆ ಒಂದು ದೀಪವನ್ನು ಇರಿಸಿ ಗಂಗಾನದಿಯಲ್ಲಿ ತೇಲಿ ಬಿಟ್ಟನು.
This shloka is taken from the chapter"निर्विमर्शा हि भीरवः .
The prince then placed a fierce monkey inside the box like before and let the box in the river Ganga, exactly as it was before, and placing a lamp on top of the box.

29. ಈ ಪದ್ಯವನ್ನು"शून्या मेऽङ्गुलिः" ("ಶೂನ್ಯಾಮೇಂಗುಲಿಃ")ಪಾಠದಿಂದ ಆಯ್ದುಕೊಳ್ಳಲಾಗಿದೆ.
(ಹೇ ರಾಜನೇ)ನೀನು ರಕ್ಷಣೆಮಾಡುತ್ತಿರುವಾಗ ಧರ್ಮಕಾರ್ಯಗಳಿಗೆ ತೊಂದರೆ ಬರಲು ಹೇಗೆ ಸಾಧ್ಯ? ಸೂರ್ಯನ ಕಿರಣಗಳು ಪ್ರಕಾಶಿಸುತ್ತಿರುವಾಗ ಕತ್ತಲೆ ಬರಲು ಹೇಗೆ ಸಾಧ್ಯ?
This shloka is taken from chapter "शून्या मेऽङ्गुलिः" ('shoonya me angulihi'). How could the pious rites be disturbed when you are the protector of the good? When the sun is shining, how can darkness make its appearance?

30. ಈ ಶ್ಲೋಕವನ್ನು "नीतिसारः" ಎಂಬ ಪದ್ಯಭಾಗದಿಂದ ಆರಿಸಿದೆ.
ಮನುಷ್ಯನು ವೇದ ಶಾಸ್ತ್ರಗಳನ್ನು ಆಲಿಸಿ ಧರ್ಮದ ರಹಸ್ಯವನ್ನು ಅರಿಯುತ್ತಾನೆ. ವಿದ್ವಾಂಸರ ವಾಣಿಯನ್ನು ಆಲಿಸಿ ಕೆಟ್ಟ ಯೋಚನೆಗಳನ್ನು ತ್ಯಜಿಸುತ್ತಾನೆ. ಗುರುವಿನ ಉಪದೇಶಗಳನ್ನು ಆಲಿಸಿ ಜ್ಞಾನವನ್ನು ಪಡೆಯುತ್ತಾನೆ. ಇವೆಲ್ಲವನ್ನು ಆಲಿಸಿ ಮನುಷ್ಯನು ಸಂಸಾರದ ಬಂಧನದಿಂದ ವಿರಕ್ತನಾಗಿ ಮೋಕ್ಷವನ್ನು ಪಡೆಯುತ್ತಾನೆ.
This shloka is taken from the chapter "नीतिसारः" |
By hearing the scriptures recited, one learns the secrets of the Dharma. By listening to the preaches of a scholar, an evil person gets rid of evil thoughts. By listening to the advice of the Guru(teacher) a person gets Knowledge and by listening all these a person gets Moksha(salvation)

७. दशवाक्यैः संस्कृत/कन्नड/आङ्ग्लभाषया वा उत्तरं लिखत।(चत्वर्णामेव)4×5=20

31. ಈ ಪ್ರಶ್ನೆಯನ್ನು "पुराणभारतम्" ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.ಈ ಪಾಠದಲ್ಲಿ ಪುರಾಣಗಳಲ್ಲಿ ಚಿತ್ರಿತವಾದ ಭಾರತದ ವರ್ಣನೆಯನ್ನು ಕಾಣಬಹುದು.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಒಟ್ಟು ಹದಿನೆಂಟು ಪುರಾಣಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಭಾರತವನ್ನು ವಿಶೇಷವಾಗಿ ವರ್ಣಿಸಲಾಗಿದೆ. ಸಮುದ್ರದಿಂದ ಉತ್ತರಕ್ಕೆ ಹಾಗೂ ಹಿಮಾಲಯದಿಂದ ದಕ್ಷಿಣಕ್ಕೆ ಹರಡಿರುವ ಭೂಪ್ರದೇಶವನ್ನು ಭಾರತವರ್ಷ ಎಂದು ಕರೆದಿದ್ದಾರೆ. ಇಲ್ಲಿ ವಾಸಮಾಡುವ ಜನರನ್ನು ಭಾರತೀಯರು ಎಂದು ಗುರುತಿಸಿದ್ದಾರೆ. ಈ ಭಾಗವನ್ನು ಒಂಭತ್ತು ದ್ವೀಪವಾಗಿ ವಿಂಗಡಿಸಲಾಗಿದೆ. ಅವು ಸಾಗರದಿಂದ ಬೇರ್ಪಟ್ಟಿರುವುದರಿಂದ ಪರಸ್ಪರ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಲು ಸಾಧ್ಯವಿಲ್ಲ. ಇಂದ್ರದ್ವೀಪ, ಕಶೇರುಮಾನ್, ತಾಮ್ರವರ್ಣ, ಗಭಸ್ತಿಮಾನ್, ನಾಗದ್ವೀಪ, ಸೌಮ್ಯ, ಗಾಂಧರ್ವ, ವಾರುಣ, ಇವು ಎಂಟು ಭಾಗಗಳು, ಸಮುದ್ರದಿಂದ ಆವೃತವಾದ ನಾವು ವಾಸಿಸುತ್ತಿರುವ ಈ ಭಾರತ ಒಂಭತ್ತನೇಯದು. ಈ ದೇಶ ದಕ್ಷಿಣದಿಂದ ಉತ್ತರಕ್ಕೆ ಸಾವಿರಯೋಜನ ವಿಸ್ತಾರವಾಗಿದೆ. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷಪರ್ವತ, ವಿಂಧ್ಯ ಹಾಗೂ ಪಾರಿಯಾತ್ರಗಳು ಸಪ್ತ ಕುಲಪರ್ವತಗಳು. ಗಂಗಾ, ಯಮುನಾ, ಸರಸ್ವತೀ, ಚಂದ್ರಭಾಗಾ, ಶತದ್ರು, ವಿತಸ್ಥಾ,ಇರಾವತೀ, ಹಾಗೂ ಕುಹೂ ಇವು ಭಾರತದ ಪ್ರಮುಖ ನದಿಗಳು. ಇವು ಜನರ ಪಾಪ ಪರಿಹಾರಮಾಡಿ ಪ್ರಪಂಚಕ್ಕೆ ಶುಭವನ್ನು ಉಂಟುಮಾಡುತ್ತವೆ. ಕಪಿಲ, ಗೋಗ್ರಹ, ಸೋಮ, ಆಲಾಬು, ಮೃತ್ಯುಂಜಯ,ಕ್ರೋಡ, ವಾಸುಕ ಹಾಗೂ ಸಿದ್ಧಕೇಶ್ವರ ಭಾರತದ ಪ್ರಮುಖ ತೀರ್ಥಕ್ಷೇತ್ರಗಳು. ಭಾರತದ ದಕ್ಷಿಣದಲ್ಲಿ ಪಾಂಡ್ಯ, ಕೇರಳ, ಚೋಳ, ಕುಲ್ಯ, ಸೇತುಕ, ಮೂಷಿಕ, ಕ್ಷಪಣ ಹಾಗೂ ವನವಾಸಿಕ ಮುಂತಾದ ದೇಶಗಳಿವೆ. ಈ ಭಾರತದಲ್ಲಿ ಮೂರುವಿಧವಾದ ಕರ್ಮವನ್ನು ಆಚರಿಸುತ್ತಾರೆ. ದೇವತೆಗಳು ಈಗಲೂ ಸಹ ಈ ಭರತಭೂಮಿಯಲ್ಲಿ ಜನಿಸಲು ಇಚ್ಛೆಪಡುತ್ತಾರೆ.
ಈ ರೀತಿಯಾಗಿ ಪುರಾಣಗಳಲ್ಲಿ ಭಾರತದ ಭೌಗೋಳಿಕ ಚಿತ್ರಣವನ್ನು,ಸಂಸ್ಕೃತಿಯನ್ನು ಸುಂದರವಾಗಿ ವರ್ಣಿಸಿದ್ದಾರೆ.
This question is taken from "पुराणभारतम्"In this chapter we can understand how India is described in Puranas
Puranas occupy the place of pride in Indian literature. In puranas we fine geographical descriptions of our country. The sub-continent, which is to the north of the ocean and south of the Himalayas, is named Bharatha. We learn that in this country of Bharata there are nine divisions. Since these divisions are separated by the ocean, they are not connected to each other. Indradweepa, Kasheruman, Tamravarna , Gabhastiman, Nagadweepa, soumyaha, Gadharva, varuna and bharata are the nine divisions. This is the ninth one and this is surrounded by the ocean. From north to south, this island measures 1000 yojanas. There are seven great mountains in Bharatavarsha namely, Mahendra, Malaya, sahya, Shukthiman, Rukshaparvataha, Vindhya and pariyatra. Great rivers like Ganga, Saraswati, Sindhu, Chandrabhaga, Shatadru, Vitastha, Iravati, and Kuhu flow here. There are number of Pilgrimage centers of which Kapilateertha, Gograhateertha, Somateertha, Alabuteertha, Mrutyunjayateertha, Krodateertha, Vasukateertha, and Siddhakeshwara teertha are famous. Pandhya, Kerala, Chola, Kulya, Setuka, Musika, Kshapana and Vanavasika are the state of

southern territories.
In this way India is described beautifully in our ancient Puranas.

32. परेषामपि रक्ष जीवितम्" ("ಪರೇಷಾಂ ಅಪಿ ರಕ್ಷ ಜೀವಿತಮ್") ಎಂಬ ಪಾಠದಲ್ಲಿ ವಿಕ್ರಮಾದಿತ್ಯನು ಹೇಗೆ ರಾಕ್ಷಸನ್ನು ಪರಿವರ್ತಿಸಿದನು ಎಂಬುದನ್ನು ಹೃದಯಂಗಮವಾಗಿ ನಿರೂಪಿಸಲಾಗಿದೆ.

ಉಜ್ಜಯಿನಿಯ ದೊರೆಯಾದ ವಿಕ್ರಮಾದಿತ್ಯನು ರಾಜ್ಯಭಾರವನ್ನು ತನ್ನ ಮಂತ್ರಿಗಳಿಗೆ ಒಪ್ಪಿಸಿ ಯೋಗಿವೇಷವನ್ನು ಧರಿಸಿ ದೇಶಸಂಚಾರಕ್ಕೆ ಹೊರಡುತ್ತಾನೆ. ಅನೇಕ ಕುತೂಹಲಭರಿತವಾದ ಪ್ರದೇಶಗಳನ್ನು ನೋಡುತ್ತಾ, ಮನಸ್ಸನ್ನು ಆಕರ್ಷಿಸುವ ಪ್ರದೇಶ ಕಂಡರೇ ಸ್ವಲ್ಪ ಸಮಯ ಅಲ್ಲೇ ನಿಂತು ಅದನ್ನು ಆಸ್ವಾದಿಸುತ್ತಾ ಮುಂದೆ ನಡೆಯುವುದು ವಿಕ್ರಮನ ಕ್ರಮವಾಗಿತ್ತು. ಇದೇ ರೀತಿ ಸಂಚರಿಸುತ್ತಾ ಒಂದು ಅರಣ್ಯಪ್ರದೇಶವನ್ನು ಪ್ರವೇಶಿಸುತ್ತಾನೆ. ಅರಣ್ಯ ಪ್ರವೇಶಿಸುವಾಗ ಕತ್ತಲಾಗುತ್ತದೆ. ಆದ್ದರಿಂದ ಅವನು ಒಂದು ಮರದ ಬುಡವನ್ನು ಆಶ್ರಯಿಸಿ ನಿಲ್ಲುತ್ತಾನೆ. ಆ ಮರದ ಕೊಂಬೆಯಲ್ಲಿ ಚಿರಂಜೀವಿ ಎಂಬ ಪಕ್ಷಿರಾಜ ವಾಸವಾಗಿದ್ದನು. ಆ ಪಕ್ಷಿರಾಜನಿಗೆ ವಯಸ್ಸಾದ್ದರಿಂದ ಅವನಿಗೆ ಉಳಿದ ಪಕ್ಷಿಗಳು ಆಹಾರವನ್ನು ತರುತ್ತಿದ್ದವು. ಸಂಜೆಯ ಸಮಯದಲ್ಲಿ ಆ ಚಿರಂಜೀವಿ ಎಲ್ಲರಲ್ಲಿಯೂ ಆ ದಿನದ ಅನುಭವನ್ನು ಕೇಳುತ್ತಿದ್ದನು. ಆ ದಿನ ಒಂದು ಪಕ್ಷಿ ಚಿಂತಿಸುತ್ತಿರುವುದನ್ನು ಕಂಡು ಕಾರಣ ಏನು ಎಂದು ಕೇಳಿದಾಗ ಅದು ಶೈವಲಘೋಷ ಪರ್ವತದ ಸಮೀಪ ಇರುವ ಪಲಾಶನಗರದಲ್ಲಿ ಜನರು ಬಕಾಸುರ ಎಂಬ ರಾಕ್ಷಸನಿಂದ ತೊಂದರೆ ಅನುಭವಿಸುತ್ತಿದ್ದಾರೆ. ಆ ಊರಿನ ಜನರು ಪ್ರತಿನಿತ್ಯ ಒಬ್ಬರನ್ನು ಆ ರಾಕ್ಷಸನಿಗೆ ಆಹಾರವಾಗಿ ಕಳುಹಿಸಲು ರಾಕ್ಷಸನ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದಾರೆ. ನಾಳೆ ನನ್ನ ಹಿಂದಿನ ಜನ್ಮದ ಸ್ನೇಹಿತನಾದ ಒಬ್ಬ ಬಡ ಬ್ರಾಹ್ಮಣನ ಸರದಿ ಬಂದಿದೆ ಅವನ ಕಷ್ಟವನ್ನು ನೋಡಿ ನಾನು ಚಿಂತಿಸುತ್ತಿದೇನೆ ಎಂದಿತು. ಇದನ್ನು ಕೇಳಿಸಿಕೊಂಡ ವಿಕ್ರಮಾದಿತ್ಯನು ನೇರವಾಗಿ ಆ ರಾಕ್ಷಸ ಪ್ರತಿನಿತ್ಯ ಮನುಷ್ಯರನ್ನು ಕೊಲ್ಲುವ ಕಲ್ಲಿನ ಸಮೀಪಕ್ಕೆ ಹೋದನು. ಆಗಲೇ ಅಲ್ಲಿಗೆ ಬಂದಿದ್ದ ಆ ಬ್ರಾಹ್ಮಣನನ್ನು ಮನೆಗೆ ಕಳುಹಿಸಿ, ಪಕ್ಕದಲ್ಲಿದ್ದ ಸರೋವರದಲ್ಲಿ ಸ್ನಾನಮಾಡಿ ಆ ಕಲ್ಲಿನಮೇಲೆ ಕುಳಿತುಕೊಂಡನು. ಅನಂತರ ಅಲ್ಲಿಗೆ ಬಂದ ರಾಕ್ಷಸನು ವಿಕ್ರಮಾದಿತ್ಯನ ನಗುಮುಖವನ್ನು ಕಂಡು ಆಶ್ಚರ್ಯದಿಂದ ನೀನು ಯಾರು ಎಂದು ಪ್ರಶ್ನಿಸುತ್ತಾನೆ. ಆಗ ನಾನು ನನ್ನ ಸ್ವ ಇಚ್ಛೆಯಿಂದ ಬೇರೆಯವರಿಗೊಸ್ಕರ ನನ್ನ ಶರೀರತ್ಯಾಗ ಮಾಡುತ್ತಿದ್ದೇನೆ ನೀನು ಸ್ವೀಕರಿಸು ಎಂದು ವಿಕ್ರಮನು ಹೇಳುತ್ತಾನೆ. ಅದನ್ನು ಕಂಡು ಸಂತೋಷಗೊಂಡು ರಾಕ್ಷಸನು ವರವನ್ನು ನೀಡುವುದಾಗಿ ಹೇಳುತ್ತಾನೆ. ಆಗ ವಿಕ್ರಮಾದಿತ್ಯನು ಈ ಕ್ಷಣದಿಂದಲೇ ಮನುಷ್ಯಭಕ್ಷಣೆಯನ್ನು ನಿಲ್ಲಿಸಲು ಹೇಳುತ್ತಾನೆ ಮತ್ತು ಹೇಗೆ ನಿನ್ನ ಜೀವ ನಿನಗೆ ಇಷ್ಟವೋ ಅದೇರೀತಿ ಬೇರೆಯವರಿಗೂ ಅವರ ಜೀವ ಇಷ್ಟವಾಗಿರುತ್ತದೆ, ಹೇಗೆ ನೀನು ನಿನ್ನ ಜೀವವನ್ನು ಕಾಳಜಿಯಿಂದ ರಕ್ಷಿಸಿಕೊಳ್ಳುವೆಯೋ ಹಾಗೆಯೇ ಇತರರ ಜೀವನವನ್ನು ಕೂಡ ರಕ್ಷಿಸು." ಎಂದು ವಿಕ್ರಮಾದಿತ್ಯನು ರಾಕ್ಷಸನಿಗೆ ಉಪದೇಶಿಸಿದನು.

ಹೀಗೆ ವಿಕ್ರಮಾದಿತ್ಯನ ಪರೊಪಕಾರಗುಣಗಳಿಂದ ಪ್ರಭಾವಿತನಾದ ರಾಕ್ಷಸ ಪರಿವರ್ತಿತನಾಗುತ್ತಾನೆ. ಇದರಿಂದ ಪಲಾಶನಗರದ ಜನರೂ ಸಂತೋಷದಿಂದ ಜೀವಿಸುತ್ತಾರೆ.

In the story "परेषामपि रक्ष जीवितम्" ("Pareshaamapi Raksha Jeevitatam") , King Vikramaditya transforms a demon by displaying the qualities of magnanimity and of doing good to others.

King Vikramaditya learnt that a demon living on the Saivala Ghosha mountain near the town of Palasa would come every day to the town, seize anyone he chanced upon and take him back to devour him. He also learnt that the people had offered to send one person every day to the demon as food. That day it was the turn of a Brahmin.

Hearing the story, Vikramaditya went to the town of Palasa. There he saw the Brahmin who had come according to his turn. He was sitting on the sacrificial boulder, his face miserable with the fear of death. Vikramaditya sent the Brahmin away and he himself sat on the boulder, waiting for the demon to arrive. The demon was astonished to see Vikramaditya sitting on the boulder, smiling, and asked him the reason for his happiness. Vikramaditya said that he was sacrificing his body for the sake of others, at his own free will. Hence there was no pain or sorrow.

The demon was pleased and asked the king to choose a boon. The king asked him to give up killing human beings. He also said that life was dear to everyone and asked the demon to protect the lives of others.

Impressed by the king, the demon gave up killing other creatures.

33. ಸೋಮದೇವನ ಕಥಾಸರಿತ್ಸಾಗರ ಗ್ರಂಥದಿಂದ ಆಯ್ದುಕೊಂಡ ಈ "निर्विमर्शा हि भीरवः"("ನಿರ್ವಿಮರ್ಷಾ ಹಿ ಭೀರವಃ") ಕಥೆಯಲ್ಲಿ ದುರುದ್ದೇಶದಿಂದ ಮಾಡಿದ ಉಪಾಯ ಹೇಗೆ ವಿಫಲವಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ಮತ್ತು ಭಯಗ್ರಸ್ತರಾದವರು ಯಾವ ವಿಷಯವನ್ನೂ ಕೂಲಂಕುಶವಾಗಿ ವಿಚಾರಿಸುವುದಿಲ್ಲ ಎಂಬ ವಿಷಯವನ್ನು ಸ್ಪಷ್ಟಪಡಿಸುತ್ತಾರೆ.

ಗಂಗಾತೀರದಲ್ಲಿ ಮಾಕಂದಿಕಾ ಎಂಬ ನಗರವಿತ್ತು. ಅಲ್ಲಿ ಒಬ್ಬ ಮೌನವ್ರತವನ್ನು ಆಚರಿಸುವ ಸನ್ಯಾಸಿಯಿದ್ದನು. ಅವನು ಲೋಭಿಯೂ ದುರಾಚಾರಿಯೂ ಆಗಿದ್ದನು. ಒಂದು ದಿನ ಅವನು ಒಬ್ಬ ವ್ಯಾಪಾರಿಯ ಮನೆಗೆ ಭಿಕ್ಷಾಟನೆಗೆ ಬಂದನು. ಭಿಕ್ಷೆ ಪಡೆದು ಹಿಂದಿರುಗುವಾಗ ಒಬ್ಬಳು ಸುಂದರ ಕನ್ಯೆಯನ್ನು ನೋಡಿದನು. ಅವಳನ್ನು ಹೇಗಾದರೂ ಪಡೆಯಬೇಕು ಎಂದು ಯೋಚಿಸಿ , "ಹಾ ಕಷ್ಟ, ಕಷ್ಟ.." ಎಂದು ಕಿರುಚಿದನು. ಅದನ್ನು ಕೇಳಿ ಆಶ್ಚರ್ಯಗೊಂಡ ವ್ಯಾಪಾರಿಯು ಮೌನವ್ರತವನ್ನು ಬಿಟ್ಟು ಮಾತನಾಡಲು ಕಾರಣವೇನೆಂದು ಕೇಳಿದನು. ಆಗ ಸನ್ಯಾಸಿಯು, "ನೀನು ನನ್ನ ಪ್ರೀತಿಯ ಶಿಷ್ಯ, ನಿನ್ನ ಕಷ್ಟವನ್ನು ನೋಡಿ ದುಃಖವಾಯಿತು ಆದ್ದರಿಂದ ನಾನು ನನ್ನ ವ್ರತವನ್ನು ಬಿಟ್ಟು ಮಾತನಾಡಿದೆ. ನಿನ್ನ ಮಗಳ ಮುಖವನ್ನು ನೋಡಿದರೆ ದುರ್ಲಕ್ಷಣಗಳು ಕಾಣುತ್ತಿವೆ. ಅವಳನ್ನು ನೀನು ಯಾವಾಗ ಮದುವೆ ಮಾಡುವೆಯೋ ಆಗ ನಿನ್ನ ಸಂಸಾರ, ಸಂಪತ್ತು ಎಲ್ಲವೂ ನಾಶವಾಗುತ್ತದೆ. ಆದ್ದರಿಂದ ನೀನು ಅವಳನ್ನು ಒಂದು ಪೆಟ್ಟಿಗೆಯಲ್ಲಿ ಇಟ್ಟು, ಅದರ ಮೇಲೆ ಒಂದು ದೀಪವನ್ನು ಇಟ್ಟು, ಗಂಗಾನದಿಯಲ್ಲಿ ತೇಲಿಸಿ ಬಿಡಬೇಕು" ಎಂದು ಹೇಳಿದನು. ಅದನ್ನು ಕೇಳಿ ಹೆದರಿದ ವ್ಯಾಪಾರಿಯು ಏನನ್ನೂ ಯೋಚಿಸದೇ ಸನ್ಯಾಸಿ ಹೇಳಿದಂತೆ ಅದೇ ದಿನ ಸಂಜೆ ಗಂಗೆಯಲ್ಲಿ ತೇಲಿಬಿಟ್ಟನು. ಸನ್ಯಾಸಿಯು ತನ್ನ ಅನುಚರರಲ್ಲಿ ಗಂಗಾನದಿಯಲ್ಲಿ ತೇಲಿಬರುವ ದೀಪಸಹಿತವಾದ ಪೆಟ್ಟಿಗೆಯನ್ನು ಜಾಗರೂಕತೆಯಿಂದ ತನ್ನ ಆಶ್ರಮಕ್ಕೆ ತರಬೇಕು ಯಾವುದೇಕಾರಣಕ್ಕೂ ಅದನ್ನು ತೆರೆಯಬಾರದು ಎಂದು ಆದೇಶಿಸಿದನು. ಅದರಂತೆ ಸನ್ಯಾಸಿಯ ಅನುಚರರು ಗಂಗಾತೀರಕ್ಕೆ ಹೋದರು. ಇದೇ ಸಂದರ್ಭದಲ್ಲಿ ಒಬ್ಬ ರಾಜಕುಮಾರ ನದಿಯ ತೀರಕ್ಕೆ ಬಂದನು. ಗಂಗಾನದಿಯಲ್ಲಿ ತೇಲಿ ಬರುತ್ತಿರುವ ಪೆಟ್ಟಿಗೆಯನ್ನು ಕಂಡು ತನ್ನ ಸೇವಕರ ಸಹಾಯದಿಂದ ಅದನ್ನು ತೆರೆದನು. ಆ ಪೆಟ್ಟಿಗೆಯಲ್ಲಿರುವ ಸುಂದರವಾದ ಕನ್ಯೆಯನ್ನು ಕಂಡು ಆಶ್ಚರ್ಯಗೊಂಡನು. ಆ ಕನ್ಯೆಯನ್ನು ಗಾಂಧರ್ವ ವಿಧಿಯಿಂದ ಮದುವೆಯಾದನು. ಆ ಪೆಟ್ಟಿಗೆಯಲ್ಲಿ ಒಂದು ಘೋರವಾದ ವಾನರವನ್ನು ಇಟ್ಟು, ಮೊದಲಿನಂತೆಯೇ ಮೇಲೆ ದೀಪವನ್ನು ಇಟ್ಟು ಗಂಗಾನದಿಯಲ್ಲಿ ತೇಲಿಬಿಟ್ಟನು. ಸ್ವಲ್ಪ ಸಮಯದ ನಂತರ ಸನ್ಯಾಸಿಯ ಅನುಚರರು ಇದ್ದಲ್ಲಿಗೆ ಆ ಪೆಟ್ಟಿಗೆ ಬಂದಿತು. ಅದನ್ನು ತೆರೆಯದೆ ತಂದು ಸನ್ಯಾಸಿಯ ಕೈಗೆ ಕೊಟ್ಟರು. ಸನ್ಯಾಸಿ ತಾನು ಅಟ್ಟದ ಮೇಲೆ ವಿಶೇಷವಾದ ಯೋಗಸಾಧನೆ ಮಾಡುತ್ತೇನೆ ಎಂದೂ ನೀವು ಯಾರೂ ಸಹ ಮೇಲೆ ಬರಬಾರದೆಂದೂ ಅನುಚರರಿಗೆ ಆದೇಶಿಸಿ, ಪೆಟ್ಟಿಗೆಯನ್ನು ಅಟ್ಟದ ಮೇಲೆ ತಂದು ತೆರೆದನು. ಆಗ ಆ ಪೆಟ್ಟಿಗೆಯಲ್ಲಿ ಇದ್ದ ಮಂಗವು ಸನ್ಯಾಸಿಯ ಮೇಲೆ ಹಾರಿ ಅವನನ್ನು ಗಾಯಗೊಳಿಸಿತು. ಆಚಾರಹೀನನಾದ ಸನ್ಯಾಸಿಯ ಸ್ಥಿತಿಯನ್ನು ನೋಡಿ ಜನರು ನಕ್ಕರು.

ಇಲ್ಲಿ ಭಯಗೊಂಡ ವ್ಯಾಪಾರಿಯು ಸರಿಯಾಗಿ ಯೋಚಿಸದೆ ಸನ್ಯಾಸಿ ಹೇಳಿದಂತೆ ಮಾಡಿದನು ಆದ್ದರಿಂದ ಭಯಗೊಂಡವರು ಯೋಚಿಸುವುದಿಲ್ಲ ಎನ್ನುವ ಶೀರ್ಷಿಕೆಯು ಈ ಪಾಠಕ್ಕೆ ತಕ್ಕದಾದಿದೆ.

The lesson "निर्विमर्शा हि भीरवः" ("Nirvimarshaa hi bheeravaha") conveys the message that timid people are unreflecting and never analyse critically before they do anything.

Once, a monk, living in a city named Makandika, on the bank of the Ganges, came to a certain merchant's house to beg. He saw the merchant's daughter coming out with alms in her hand. The monk, seeing that she was wonderfully beautiful, plotted a plan to get her. He told her father that his daughter had inauspicious marks and that they all would die if she were to marry. Hence, he suggested that her to put in a box and should be left in the Ganga with a lamp kept on top of the box.

The timid merchant did not reflect on what the monk had said and out of fear agreed to do as the surprisingly monk had directed. He put his daughter in a box and left in the Ganga. A prince got the box. He opened the box and saw the enchanting girl. He married her on the spot according to the gandharva ceremony of marriage.

Thus, the merchant, who was timid, and did not think before doing anything, set his daughter let go without giving it a second thought. Hence the title is apt for the story.

34. ಈ ಪ್ರಶ್ನೆಯನ್ನು “शून्या मेऽङ्गुलिः”. ಎಂಬ ಪಾಠದಿಂದ ಆರಿಸಲಾಗಿದೆ.ಕಾಳಿದಾಸನಿಂದ ರಚಿತವಾದ ’ಅಭಿಜ್ಞಾನ ಶಾಕುಂತಲಂ’ ಎನ್ನುವ ಮಹಾಕಾವ್ಯದಲ್ಲಿ ಈ ಅಂಗುಲೀಯಕ ಪ್ರಸಂಗವನ್ನುಕಾಣಬಹುದು.

ಒಮ್ಮೆ ಹಸ್ತಿನಾವತಿಯ ದೊರೆಯಾದ ದುಷ್ಯಂತನು ಬೇಟೆಗೆಂದು ಅರಣ್ಯಕ್ಕೆ ಹೊಗುತ್ತಾನೆ. ನಂತರ ಅವನು ಕಣ್ವಾಶ್ರಮಕ್ಕೆ ತಲುಪುತ್ತಾನೆ. ಅಲ್ಲಿ ಅವನು ಅತ್ಯಂತ ಸುಂದರಿಯಾದ ಶಕುಂತಲೆಯನ್ನು ನೋಡುತ್ತಾನೆ ಮತ್ತು ಅವರಿಬ್ಬರೂ ಪರಸ್ಪರ ಪ್ರೀತಿಸುತ್ತಾರೆ. ನಂತರ ಗಾಂಧರ್ವವಿಧಿಯಲ್ಲಿ ವಿವಾಹವಾಗುತ್ತಾನೆ. ಕೆಲವು ದಿನಗಳನಂತರ ದುಷ್ಯಂತನು ಅಭಿಜ್ಞಾನವಾಗಿ (ಗುರುತಾಗಿ)ತನ್ನ ಮುದ್ರೆಯುಂಗುರವನ್ನು ಆಕೆಗೆ ನೀಡಿ ಹಸ್ತಿನಾವತಿಗೆ ತೆರಳುತ್ತಾನೆ

ಗರ್ಭವತಿಯಾದ ಶಕುಂತಲೆ ಸದಾ ದುಶ್ಯಂತನ ಚಿಂತನೆಯಲ್ಲಿಯೇ ಕಾಲಕಳೆಯುತ್ತಾ ಇರುತ್ತಾಳೆ. ಒಂದು ದಿನ ಕಣ್ವರು ಆಶ್ರಮದಲ್ಲಿ ಇಲ್ಲದ ಸಮಯದಲ್ಲಿ ದೂರ್ವಾಸ ಮುನಿಗಳು ಆಶ್ರಮಕ್ಕೆ ಬರುತ್ತಾರೆ. ಆಗ ಸರಿಯಾದ ಉಪಚಾರ ಮಾಡದೇ ಇರುವ ಶಕುಂತಲೆಗೆ “ ನೀನು ಯಾರ ನೆನಪಿನಲಿರುವೆಯೋ ಅವರಿಗೆ ನಿನ್ನ ನೆನಪು ಮರೆತುಹೋಗಲಿ” ಎಂದು ಶಾಪ ನೀಡುತ್ತಾರೆ. ಅದರ ಪರಿಣಾಮವಾಗಿ ದುಷ್ಯಂತನಿಗೆ ಹಿಂದಿನ ಘಟನೆಗಳು ಮರೆತುಹೋಗಿದ್ದವು.

ನಂತರ ಕಣ್ವರ ಮಾತಿನಂತೆ ಶಾರ್ಙರವ,ಶಾರದ್ವತ,ಗೌತಮಿಯರ ಜೊತೆ ಶಕುಂತಲೆಯು ಹಸ್ತಿನಾವತಿಗೆ ಬರುತ್ತಾಳೆ.ದುಶ್ಯಂತನ ಆಸ್ಥಾನದಲ್ಲಿ ಶಕುಂತಲೆ ಹಾಗೂ ಕಣ್ವಶಿಷ್ಯರು ಎಷ್ಟು ಹೇಳಿದರೂ ಸಹ ದುಷ್ಯಂತನು ಶಕುಂತಲೆಯುನ್ನು ಹೆಂಡತಿಯೆಂದು ಒಪ್ಪಿಕೊಳ್ಳುವುದಿಲ್ಲ. ಈ ಮಾತುಗಳು ಸುಳ್ಳು ಎಂದು ದುಷ್ಯಂತನು ಪ್ರತಿಪಾದಿಸುತ್ತಾನೆ.ಶಕುಂತಲೆ ಆತನಿಗೆ ವಿಶ್ವಾಸ ಹುಟ್ಟಿಸುವಲ್ಲಿ ವಿಫಲವಾಗುತ್ತಾಳೆ. ಆಗ ಶಂಕುತಲೆ ತಮ್ಮ ಪ್ರೇಮದ ಕುರುಹಾದ, ದುಶ್ಯಂತನು ತನಗೆ ನೀಡಿದ ಉಂಗುರವನ್ನು ತೋರಿಸಲು ಮುಂದಾಗುತ್ತಾಳೆ. ಆಗ ಅವಳ ಕೈಯ್ಯಲ್ಲಿ ಉಂಗುರ ಇರುವುದಿಲ್ಲ. ಅದರಿಂದ ಪುನಃ ಬೇಸರಗೊಳ್ಳುತ್ತಾಳೆ. ಆಗ ಗೌತಮಿಯು ಶಚೀತೀರ್ಥದ ನೀರಿನಲ್ಲಿ ಬಿದ್ದಿರಬೇಕು ಎಂದು ಹೇಳುತ್ತಾಳೆ. ಆಗ ದುಷ್ಯಂತನು ನೀವು ಸುಳ್ಳನ್ನು ಸುಂದರವಾಗಿ ಹೇಳುತ್ತೀರಿ ಎಂದು ಹೇಳುವ ಮೂಲಕ ಅವಳಮಾತನ್ನು ತಿರಸ್ಕರಿಸುತ್ತಾನೆ.

ಹೀಗೆ ಈ ಪಾಠದಲ್ಲಿ ಮುದ್ರೆಯುಂಗುರದ ಕಥಾಭಾಗವು ಅಂಗುಲೀಯಕ ಪ್ರಸಂಗ ಎಂದು ವರ್ಣಿತವಾಗಿದೆ.

This question is taken from the lesson “शून्या मेऽङ्गुलिः”.AnguleeyakaPrasanga' occurs in the play 'Abhijnaanashaakuntalam' written by the famous poet Kalidasa.

One day King Dushyanta of Hastinapura, while returning from a deer hunt, happens to stop by the hermitage of sage Kanva. There he sees the enchanting Shakuntala. They fall in love with each other. In the absence of sage Kanva, they secretly marry by the Gandharva form of marriage. After a few days Dushyanta returns to his kingdom after giving her a signet ring as a token of love.

One day, sage Durvasa comes to the hermitage. Shakuntala, her thoughts being away with her absent husband, fails to offer proper hospitality to the sage. This infuriates the temperamental sage and he censures Shakuntala, cursing her with the words - "He of whom you are thinking - he won't remember you even when reminded (by you)". On the plea of Anasuya, one of Sakuntala's companions, the sage relents and says that if the king sees some token of recognition that he has given her, he will remember everything. After returning from Somatheertha, sage Kanva learns about the marriage and decides to send Shakuntala to her husband's house. The young hermits Sarngarava and Sharadvata accompanied by Gautami and Sakuntala, proceed to the palace of King Dushyanta. King Dushyanta instructs his priest Somaratha to receive them in the manner stated in the scriptures. After the exchange of greetings, Sharngrava, the chief of the sages who is accompanying Shakuntala, reads out sage Kanva's message asking the king to accept his wife Shakuntala. The king, to whom all this comes as a complete surprise, denies any knowledge of the affair, and even Shakuntala fails to rouse his memory due to Durvasa's curse. As a last resort she wants to show the signet ring which he had given her and which would remove all doubts, but for her

bad luck it was not there on her finger. Gautami says that it must have probably fallen off when she worshipped Shachitirtha at Shakravatara.but Dushyanta was not ready to trust her words.
This event is called as ‘anguleeyaka prasanga’ in ‘abhijnana shakuntalam’.

35. ಮಹಾರಾಣಾ ಪ್ರತಾಪ ಅನುಭವಿಸಿದ ಕಷ್ಟಪರಂಪರೆಯನ್ನು“महाराणाप्रताप:” ಎನ್ನುವ ಪಾಠದಲ್ಲಿ ಮನೋಜ್ಞವಾಗಿ ವರ್ಣಿಸಿದ್ದಾರೆ.ಹಳ್ದೀಘಾಟ್ ಯುದ್ಧದ ನಂತರ ರಾಣಾಪ್ರತಾಪ ಹಾಗೂ ಅವನ ಕುಟುಂಬದವರು ತುಂಬಾ ಕಷ್ಟವನ್ನು ಅನುಭವಿಸಿದರು. ವಾಸಮಾಡಲು ಮನೆಯಿಲ್ಲದೆ, ಗುಹೆ, ಬೆಟ್ಟಗಳ ತಪ್ಪಲು ಪ್ರದೇಶಗಳಲ್ಲಿ ವಾಸಮಾಡುವ ಸಂದರ್ಭ ಎದುರಾಯಿತು. ತಿನ್ನಲು ಆಹಾರವಿಲ್ಲದೆ ಹಸಿವಿನಿಂದ ಬಳಲುವ ಸ್ಥಿತಿ ನಿರ್ಮಾಣವಾಯಿತು. ರಾಣಾಪ್ರತಾಪನಿಗೆ ಒಂದುಕಡೆ ಕಾಡುಪ್ರಾಣಿಗಳ ಭಯವಾದರೆ, ಇನ್ನೊಂದು ಕಡೆ ಶತ್ರುಸೈನ್ಯದ ಭಯ. ಯಾವ ಸಮಯಕ್ಕೆ ಯಾವ ದಿಕ್ಕಿನಿಂದ ವೈರಿಗಳು ಆಕ್ರಮಣ ಮಾಡುತ್ತಾರೋ ಎಂಬ ಭಯದಿಂದ ದಿನ ಕಳೆಯುವ ಸ್ಥಿತಿ ಅವರದ್ದಾಗಿತ್ತು. ಸಿಕ್ಕ ಸ್ವಲ್ಪ ಆಹಾರದಲ್ಲಿಯೇ ಜೀವನ ಸಾಗಿಸಬೇಕಾದ ಸಂದರ್ಭವೂ ನಿರ್ಮಾಣವಾಗಿತ್ತು.
ಒಂದು ದಿನ ರಾಣಾಪ್ರತಾಪನ ಪತ್ನಿಯು ಕಾಡಲ್ಲಿ ಬೆಳೆಯುವ ಹುಲ್ಲಿನ ಬೀಜದಿಂದ ಹಿಟ್ಟನ್ನು ಮಾಡಿ ಅದರಿಂದ ರೊಟ್ಟಿಯನ್ನು ಮಾಡಿ ಪ್ರತಿಯೊಬ್ಬರಿಗೂ ಚಿಕ್ಕಚಿಕ್ಕ ತುಂಡುಗಳನ್ನು ನೀಡಿದಳು.ತನ್ನ ಮಗಳಿಗೂ ರೊಟ್ಟಿತುಂಡನ್ನು ನೀಡಿ ಅರ್ಧತಿಂದು ಅರ್ಧ ನಾಳೆಗಾಗಿ ರಕ್ಷಿಸಿಕೊ ಎಂದು ಹೇಳಿದಳು.ನಾಳೆ ಆಹಾರ ಸಿಗುವುದೋ ಇಲ್ಲವೋ ಎನ್ನುವ ಆತಂಕ ದಿಂದ ತಾಯಿ ಮಗಳಿಗೆ ಹಾಗೆ ಹೇಳಿದಳು.ಆದರೆ ಹಲವುದಿನಗಳಿಂದ ಸರಿಯಾದ ಆಹಾರ ಸಿಗದೆ ಹಸಿವಿನಿಂದ ಬಳಲಿದ್ದ ಆ ಬಾಲಕಿಯು ಪೂರ್ತಿ ರೊಟ್ಟಿಯನ್ನು ತಿನ್ನಲು ಆರಂಭಿಸಿದಳು,ಆಗ ಎಲ್ಲಿಂದಲೋ ಬಂದ ಕಾಡುಬೆಕ್ಕು ಆ ರೊಟ್ಟಿಯ ತುಂಡನ್ನು ಕಸಿದುಕೊಂದು ಹೋಯಿತು.ಅದರಿಂದ ದುಃಖಿತಳಾದ ಬಾಲಕಿ ಜೋರಾಗಿ ಅಳಲಾರಂಭಿಸಿದಳು.ಈ ಕರುಣಾಜನಕವಾದ ದೃಶ್ಯವು ಕಠೋರ ಹೃದಯದ ರಾಣಾಪ್ರತಾಪನ ಹೃದಯವನ್ನು ಕೂಡ ಕರಗಿಸಿತು.
ಇಷ್ಟೊಂದು ಕಷ್ಟಗಳನ್ನು ಅನುಭವಿಸಿದರೂ ಸಹ ರಾಣಾಪ್ರತಾಪನು ತನ್ನ ಸಂಕಲ್ಪವನ್ನು ಮರೆಯದೆ ಕಳೆದುಕೊಂಡ ಎಲ್ಲಾ ಪ್ರದೇಶಗಳನ್ನು ಪುನಃಗೆದ್ದು ತನ್ನ ಸಾಮ್ರಾಜ್ಯವನ್ನು ಕಟ್ಟಿದನು.

The chapter “महाराणाप्रताप:” shows difficulties faced by Ranapratapa.When they were staying in the forest, Rana Pratap's family had to face a lot of problems. The fear of the attack of the enemies on the one hand and the problems faced by his family due to lack of food on the other, caused him great anxiety and pain. One day his wife prepared rotis from the grains of the hay in the forest and served small pieces to the family members. She gave rotis to her children and ate only a half of the small piece of roti and instructed her daughter to keep the other half for the next day. She did so because she was not sure if food would be available the next day for her beloved daughter. His family led such a pathetic life. But, as his daughter had not taken proper food for many days, she started eating the piece of roti. But a wild cat appeared suddenly, snatched the roti from her hand and ran away. The girl started crying loudly. This incident melted the stonehearted Rana Pratap.

36. ಪುಂಡರೀಕನ ಜನ್ಮವೃತ್ತಾಂತವು“अनुरागोदय:”("ಅನುರಾಗೋದಯ:") ಎಂಬ ಪಾಠದಲ್ಲಿ ವರ್ಣಿಸಲಾಗಿದೆ.
ಹಿಂದೆ ದೇವಲೋಕದಲ್ಲಿ ನೆಲಸಿರುವ ಭಗವಾನ್ ಶ್ವೇತಕೇತು ಎಂಬ ಮಹಾಮುನಿಯಿದ್ದನು. ಆತನಾದರೂ ತ್ರಿಲೋಕ ಸುಂದರನಾಗಿದ್ದನು. ಒಮ್ಮೆ ಆತನು ದೇವಪೂಜೆಯ ಸಲುವಾಗಿ ಕಮಲಗಳನ್ನು ಕಿತ್ತು ತರಲು ಮಂದಾಕಿನೀ ಸರೋವರದಲ್ಲಿ ಇಳಿದನು. ಆಗ ದೇವಿ ಮಹಾಲಕ್ಷ್ಮಿಯು ಆತನನ್ನು ನೋಡಿದಳು. ಹಾಗೂ ಆತನನ್ನು ನೋಡಿದ ಮಾತ್ರಕ್ಕೆ ಕಾಮಸಮಾಗಮದ ಸುಖವನ್ನು ಅನುಭವಿಸಿದಳು. ನಂತರ ಆಕೆಯು ಕುಳಿತಿದ್ದ ಬಿಳಿಯ ತಾವರೆಯಲ್ಲಿ ಗಂಡು ಶಿಶುವು ಜನಿಸಿತು. ತದನಂತರ ಲಕ್ಷ್ಮಿಯು ಆ ಮಗುವನ್ನು ಆತನ ಮಡಿಲಲ್ಲಿ ಮಲಗಿಸಿ - `ಭಗವಾನ್ ಈತನು ನಿನ್ನ ಮಗನೇ' ಎಂದು ಹೇಳಿ ಆ ಮಗುವನ್ನು ಶ್ವೇತಕೇತುವಿಗೆ ನೀಡಿದಳು. ಪುಂಡರೀಕ (ಬಿಳಿತಾವರೆ)ದಲ್ಲಿ ಅವನು ಹುಟ್ಟಿದ್ದರಿಂದ ಆತನಿಗೆ ಪುಂಡರೀಕ ಎಂದು ನಾಮಕರಣ ಮಾಡಲಾಯಿತು.

ಅನುರಾಗೊದಯಃ ಪಾಠದ ನಾಯಕನಾದ ಪುಂಡರೀಕನ ಜನ್ಮವೃತ್ತಾಂತವನ್ನು ಕವಿ ಈ ರೀತಿಯಾಗಿ ವರ್ಣಿಸಿದ್ದಾನೆ.

The episode of the birth of Pundarika is narrated in the lesson “अनुरागोदयः” "Anuraagoodayaha". There was a great sage, named Shvetaketu, who resided in the heavenly regions. His fame was known over all the three worlds. Once, it so happened that he, wishing to pluck a few lotuses for the worship of the deities, went down to the Mandakini Lake. At the time when he was going down into it, he was seen by the Goddess Lakshmi, and her mind was overcome with love. By merely looking at him she enjoyed the pleasure of an actual union with him; and she had her desire gratified on that same white lotus which was used by her as a seat. And from that lotus was born a son. Then she carried him in her lap and gave him to that sage, Shvetaketu, saying "Holy Sir! Receive this son of yours". As he was born in a pundarika (white lotus), he gave him that very name, Pundarika

37. “सा शान्तिः”('ಸಾ ಶಾಂತಿಃ')ಈ ಕಥೆಯ ಮೂಲ ಲೇಖಕರು ಡಾ॥ ಶಿವರಾಮಕೃಷ್ಣನ್‌ರವರು, ಡಾ|| ಬಿ.ಎಸ್. ರಾಮಕೃಷ್ಣರಾವ್ ಅವರು ಈ ಕಥೆಯನ್ನು ಸಂಸ್ಕೃತಕ್ಕೆ ಅನುವಾದಿಸಿರುವರು.

ಕಥೆಯ ಹೆಸರೇ ಸೂಚಿಸುವಂತೆ ಈ ಕಥೆಯ ನಾಯಕಿ 'ಶಾಂತಿ' ಎಂಬ ತರುಣಿ. ಇಪ್ಪತ್ತರ ಹರೆಯದ ಈಕೆ ಸೌಂದರ್ಯವತಿ, ಅನಿವಾರ್ಯವಾಗಿ ಬಟ್ಟೆಯ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಆಕೆಯು ಕೆಲಸಮಾಡುತ್ತಿದ್ದ ಬಟ್ಟೆಯ ಅ0ಗಡಿಯ ಸನಿಹವೇ ತರುಣನೋರ್ವನು ಕಾರ್ಯಾಲಯದಲ್ಲಿ ಕೆಲಸಮಾಡುತ್ತಿದ್ದನು. ಇವಳ ಅನುಪಮ ಸೌಂದರ್ಯಕ್ಕೆ ಮಾರುಹೋಗಿ, ತನ್ನ ಮನಸ್ಸಿನಲ್ಲಿಯೇ ಹಲವು ಬಗೆಯ ಭಾವನೆಗಳನ್ನು ತುಂಬಿಕೊಂಡು ಸದಾ ಆಕೆಯ ಕುರಿತು ಚಿ0ತಿಸುತ್ತಿದ್ದನು. ಒಮ್ಮೆ ಶಾಂತಿಯು ಇವನ ಕಾರ್ಯಾಲಯಕ್ಕೆ ಆಗಮಿಸಿ, ತನ್ನ ಪರಿಚಯವನ್ನು ತಿಳಿಸಿ, ನನ್ನ ಪತಿ ನಿಮ್ಮಿಂದಾಗಿಯೇ ಈ ಮಹಾನಗರದಲ್ಲಿ ಜೀವನವನ್ನು ಕಟ್ಟಿಕೊಳ್ಳಲು ಸಾಧ್ಯವಾಯಿತು,ಆದ್ದರಿಂದ ನಾವಿಬ್ಬರೂ ಒಟ್ಟಾಗಿ ಬಂದು ನಿಮಗೆ ಕೃತಜ್ಞತೆ ಸಲ್ಲಿಸಬೇಕೆಂದುಕೊಂಡಿದ್ದೆವು ಆದರೆ ಅದು ಸಾಧ್ಯವಾಗಲೆ ಇಲ್ಲ ಎಂದು ಹೇಳಿ,

ಮಾರನೆಯ ದಿನ ತನ್ನ ಪತಿಯ ವಾರ್ಷಿಕ ಶ್ರಾದ್ಧವಿರುವುದರಿಂದ ಆಶೀರ್ವಾದವನ್ನು ಪಡೆಯಲು ಬಂದಿರುವಳೆಂದು ಹೇಳುತ್ತಾಳೆ.

ಇವಳ ಸಂಸ್ಕಾರಪೂರಿತ ಸದ್ವರ್ತನೆಗೆ ಆ ತರುಣನ ಮನಸ್ಸು ಪರಿವರ್ತನೆ ಹೊಂದುತ್ತದೆ. ಸಮಾಜದಲ್ಲಿ ಸ್ತ್ರೀಯರನ್ನು ಗೌರವದಿಂದ ಕಾಣಬೇಕೆ0ಬ ಸಂದೇಶವು 'ಶಾಂತಿಯ' ಮೂಲಕ ಓದುಗರ ಮನಸ್ಸನ್ನು ತಲುಪುತ್ತದೆ.

“सा शान्तिः”("Saa Shaantihi") is a story originally written in English by Dr. Shivaramakrishnan. It was translated into Sanskrit by Dr. B.S. Ramakrishna Rao.

The heroine of the story, as the very title suggests, is a young lady called Shanthi. She was very beautiful and was in her twenties. Owing to circumstances she was working in a garment shop. A young man worked in an office close to that shop. He was enraptured by her beauty, and his mind would be engrossed in her thoughts always. Once, Shanthi came to his office and sought his blessings as it was her husband's first death anniversary the next day. Her cultured behaviour destroyed the evil in his mind and transformed him. Thus, the story "Saa Shaantihi" gives the message that one should respect women in the society.

PART-D

यथानिर्देशं कुरुत।(त्रयाणामेव) 3×3=9

38. सन्धिं विभजत/योजयत।(त्रयाणामेव)

भीषण+ आकृतिः ।

एक + एकम् ।

प्राक्+ एव ।

सर्वेऽपि

ततस्ततः

39. विग्रहवाक्यं/समस्तपदं लिखत।(त्रयाणामेव)
वस्त्रस्य आपणः
इन्द्र इति द्वीपः
कामश्च क्रोधश्च
धवलकीर्तिः
प्रत्यहम्

40. पदपरिचयं कुरुत। (त्रयाणामेव)
क्त्वान्ताव्यायम् ।
ल्यबन्ताव्यायम् ।
तुमुन्नान्ताव्यायम् ।
क्त प्रत्ययः, भूत कृदन्तः ।
शतृ प्रत्ययः, वर्तमाना कृदन्तः ।

41. प्रयोगं परिवर्तयत।
विक्रमादित्येन कालः नीयते ।
अथवा
अहं तां पश्यामि ।

42. अलङ्कारं सलक्षणम् निर्दिशत।
उपमालङ्कारः-
लक्षणम् उपमा यत्र सादृश्यलक्ष्मीरुल्लसति द्वयोः ।
अथवा
उत्प्रेक्षालङ्कारः-
लक्षणम् – सम्भावना स्यादुत्प्रेक्षा ।

43. संस्कृतभाषया अनुवदत।5×1=5
गोपालकृष्णगोखले महोदयः अप्रतिमदेशभक्तः आसीत्। सः भारतस्य स्वातन्त्र्यसंग्रामे प्रमुखपात्रं निरवहत्। सः उत्तम वाग्मी च आसीत् । जनाः तस्य वचनेन प्रेरणां स्वीकृत्य स्वातन्त्र्यसंग्रामे भागं गृहीतवन्तः। तस्य सरलं निस्वार्थं च जीवनं सर्वेषां आदर्शप्रायः वर्तते।

44. इमं परिच्छेदं पठित्वा प्रश्नानां उत्तराणि लिखत।4×1=4

1.सिंहः रोगपीडितः आसीत्।
2. उष्ट्रः नृपाय"यत् अहङ्कारिणं शृगालं विहाय सर्वे भवन्तं द्रष्टुम् आगताः" इति।"
3.सिंहः उष्ट्रस्य रक्तं पीतवान्।
4.पिशुनतायाः दुष्फलम् उष्ट्रेण स्वयमेव प्राप्तम् ।।